"ಅದು ನಿಮ್ಗೆ ಹೇಗೆ ಗೊತ್ತು?" ಆತನಿಗೆ ಅಚ್ಚರಿ.

"ಅದು ನಿನ್ಗೆ ಅಗತ್ಯವಿಲ್ಲ. ಪ್ರಶ್ನೆಗೆ ಉತ್ತರ ಕೊಡು."

"ಹೌದು, ಸಾರ್. ಯಜಮಾನರು ಡಾಕ್ಟರಲ್ಲಿಗೆ ಹೋಗಿದ್ದಾಗ ಎಲ್ಲೋ ಬಿಟ್ಟು ಬಂದ್ರು. ಎಲ್ಲಿ ಅಂತ ಅವರಿಗೆ ಸರಿಯಾಗಿ ನೆನಪಿರಲಿಲ್ಲ. ನನ್ನನ್ನು ಕಳಿಸಿದರು. ನಾನು ಡಾಕ್ಟರಲ್ಲಿ, ಮೆಡಿಕಲ್ ಶಾಪಲ್ಲಿ ವಿಚಾರಿಸಿದೆ. ಅಲ್ಲಿ ಸಿಗಲಿಲ್ಲ."

ಆತನಿಂದ ಕೆಲವಷ್ಟು ಮಾಹಿತಿ ಪಡೆದೆವು. ಮನೆಯಲ್ಲಿ ಪೂವಯ್ಯ ಮತ್ತು ಚೆಂದಕ್ಕಿ ಇಬ್ಬರೇ ಇರುವುದು. ಪೂವಯ್ಯನ ಇಬ್ಬರು ಮಗಂದಿರೂ ಮದುವೆಯಾಗಿ, ಬೇರೆ ಮನೆಯಲ್ಲಿದ್ದಾರೆ. ಪೂವಯ್ಯನ ಹೆಂಡತಿ ತೀರಿಹೋಗಿ ಕೆಲವು ವರ್ಷಗಳಾಗಿವೆ. ಪೂವಯ್ಯನಿಗೆ ಸುಮಾರು ಎಪ್ಪತ್ತು ವರ್ಷಗಳಾದರೂ, ಗಟ್ಟಿಮುಟ್ಟಾದ ಆಳು. ನಿತ್ಯ ಸಂಜೆ ವಾಕಿಂಗಿಗೆ ಹೋಗ್ತಾರೆ. ಯಾವಾಗಲೂ ಚೆಂದಕ್ಕಿಯೇ ಅಡುಗೆ ಮಾಡುವುದಾದರೂ, ಇವತ್ತು ಹೋಟೆಲಿನಿಂದ ತರಲು ಹೇಳಿದ್ರಂತೆ.

ನಾವು ಮನೆಯಿಡೀ ತಲಾಶು ಮಾಡಿದೆವು. ಪೂವಯ್ಯನ ಮಲಗುವ ಕೋಣೆಯಲ್ಲಿ ನಮಗೊಂದು ಉಯಿಲಿನ ಪ್ರತಿ ಸಿಕ್ಕಿತು. ಅದರಲ್ಲಿ ಪೂವಯ್ಯ ತನ್ನ ಆಸ್ತಿಯನ್ನು ತನ್ನಿಬ್ಬರೂ ಪುತ್ರರಿಗೆ ಸಮನಾಗಿ ಹಂಚಿದ್ದ. ಆತನ ಬ್ಯಾಂಕಿನ ಪಾಸ್ ಬುಕ್ ಸಿಕ್ಕಿತು. ಆತ ಆ ದಿನ ಬ್ಯಾಂಕಿನಿಂದ ಎರಡು ಲಕ್ಷ ಮೊತ್ತ ತೆಗೆದ ವಿವರ ಇತ್ತು. ಬೇರೇನೂ ಗಮನ ಸೆಳೆಯುವಂತಹದು ದೊರಕಲಿಲ್ಲ. ಪೂವಯ್ಯ, ಆತನ ಮಕ್ಕಳ ಹಾಗೂ ಚೆಂದಕ್ಕಿಯ ಚರವಾಣಿಯ ನಂಬರು ಪಡೆದುಕೊಂಡು, ನಾವು ಅಲ್ಲಿಂದ ಹೊರಬಿದ್ದೆವು.

ಅಲ್ಲಿಂದ ನಾವು ತೆರಳಿದ್ದು ಜಮ್ಮಾ ಸುಬ್ಬಯ್ಯನ ಮನೆಗೆ. ಗಂಟೆ ಆವಾಗ ಒಂಬತ್ತೂವರೆ. ಅರವತ್ತರ ಆಸುಪಾಸಿನಲ್ಲಿದ್ದ ಸುಬ್ಬಯ್ಯನಿಗೆ ನಮ್ಮನ್ನು ಕಂಡು ಅಚ್ಚರಿ. ನಾಣಯ್ಯ ಹೇಳಿದುದನ್ನು ಅರುಹಿದಾಗ, ಆತ ವ್ಯಗ್ರನಾದ,

"ಅವ್ನಿಗೆ ತಲೆ ಇಲ್ಲ! ಪತ್ತೆದಾರರು ಬರುವಂತಹದೇನು ಆಗಿದೆ? ಯಾರೋ ಇಬ್ಬರು ಹಲ್ಲೆ ಮಾಡಿದರು. ನನ್ಗೇನೂ ಪೆಟ್ಟಾಗಿಲ್ಲ. ಮೂರ್ಖರು! ಅವರು ತಪ್ಪು ಕಲ್ಪನೆಯಿಂದ ಹಲ್ಲೆ ಮಾಡಿರಬೇಕು. ನೀವು ವಿಚಾರಣೆ ಮಾಡುವುದೇನೂ ಅಗತ್ಯವಿಲ್ಲ."

"ಸುಮ್ನೆ ಯಾಕೆ ರೇಗುತ್ತೀರಿ? ನಾಣಿ ಹೇಳಿದ್ದಕ್ಕೆ ಇವರು ಬಂದಿದ್ದು."

ಆಮೇಲೆ ಸುಬ್ಬಯ್ಯ ನಮ್ಮ ಪ್ರಶ್ನೆಗಳಿಗೆ ಉತ್ತರಿಸದೇ ಮಂಕು ಬಡಿದವನಂತೆ ಕುಳಿತಿದ್ದ. ಸುಬ್ಬಯ್ಯನ ಹೆಂಡತಿ ನಮಗೆ ಇನ್ನಷ್ಟು ವಿವರ ನೀಡಿದಳು. ಹೆಚ್ಚಾಗಿ ಸಂಜೆ ಸುಬ್ಬಯ್ಯ ಹತ್ತಿರದ ಪಾರ್ಕಿಗೇ ವಾಕಿಂಗಿಗೆ ಹೋಗುವುದು. ಕೆಲವೊಮ್ಮೆ ಅಲ್ಲಿಗೆ ಅವರ ಮಿತ್ರರೂ ಬರುತ್ತಾರೆ. ಆದರೆ ಮಿತ್ರರ ಹೆಸರುಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ನಿರ್ಭಾವುಕ ಹೆಂಗಸು! ಸಂಜೆ ಎಂಟು ಗಂಟೆಯ ಒಳಗೆಲ್ಲಾ ಹಿಂದಿರುಗುತ್ತಾರೆ. ನಿನ್ನೆ ಎಂಟೂವರೆಯಾದರೂ ಹಿಂದಿರುಗದಿದ್ದುದು ಕಂಡು, ಪಾರ್ಕಿಗೆ ಹೋದಾಗಲಷ್ಟೇ, ಹಲ್ಲೆಯ ವಿಷ್ಯ ತಿಳಿದದ್ದು. ಸುಬ್ಬಯ್ಯನ ಮೇಲೆ ಹಲ್ಲೆಗೆ ಉಪಯೋಗಿಸಿದ ವಾಕಿಂಗ್ ಸ್ಟಿಕ್ ನಾಣಯ್ಯ ತೋರಿಸಿದ್ದೇ ಆಗಿತ್ತು.



ಅಲ್ಲಿಂದ ನಾವು ಹಿಂತಿರುಗುವಾಗ ಸಮಯ ಹತ್ತೂವರೆ ಮೀರಿತ್ತು.

★★★

ಪೂವಯ್ಯ, ಆತನ ಪುತ್ರರು ಹಾಗೂ ಸುಬ್ಬಯ್ಯನ ಹಲ್ಲೆಯ ಬಗ್ಗೆ ಮಾಹಿತಿ ಸಂಗ್ರಹಿಸಲು ಕರಮಚಂದ ನನಗೆ ಸೂಚಿಸಿದ್ದ. ಆತನು ಪೂವಯ್ಯ ಮತ್ತಿತರರ ಚರವಾಣಿಯ ಕರೆಗಳ ದತ್ತಾಂಶ ಸಂಗ್ರಹಿಸಿ, ಅವುಗಳ ವಿಶ್ಲೇಷಣೆಯ ಕೆಲಸ ವಹಿಸಿಕೊಂಡಿದ್ದ. ಅದೊಂದು ನನಗೆ ಹೊಸ ಅನುಭವವಾಗಿತ್ತು. ಪೂವಯ್ಯನ ಮನೆ ಸಮೀಪದ ಗೂಡಂಗಡಿಯವನು ನನಗೆ ಬಹಳಷ್ಟು ಸಹಾಯ ಮಾಡಿದ. ಆತನ ಮಕ್ಕಳು ಇರುವ ಜಾಗದ ಬಗ್ಗೆ ಆತನಿಂದ ತಿಳಿಯಿತು. ಮಕ್ಕಳ ಬಗ್ಗೆ